ದಿನಾಂಕ: 31.12.2018

"ಸಭೆಯ ಆಹ್ವಾನ ಪತ್ರ"

ದಿನಾಂಕ: 05.01.2019 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಕಛೇರಿ, ಪಾಲಿಕೆ ಸದಸ್ಯರ ಕೊಠಡಿಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಭೆಯ ಅಧ್ಯಕ್ಷತೆಯನ್ನು ವಾರ್ಡ್ ಕಮಿಟಿಯ ಅಧ್ಯಕ್ಷರಾದ ಶ್ರೀ ಗುರುಮೂರ್ತಿ ರೆಡ್ಡಿ ರವರು ವಹಿಸಿರುತ್ತಾರೆ. ವಾರ್ಡ್ ನಂ: 174ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ಸಾರ್ವಜನಿಕರಿಂದ ಬಂದಂತಹ ಮನವಿಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವಂತೆ ಕೆಲಸ ಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರುಗಳಾದ ತಾವುಗಳು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಕೋರುತ್ತೇನೆ.

ವಿಷಯ:

1. ಸಾಮಾನ್ಯ ಸಭೆ.
2. ಅಧ್ಯಕ್ಷರು ಅಪ್ಪಣೆ ಮೇರೆಗೆ ಇತರೆ ವಿಷಯಗಳು.

"Meeting Invitation"

This is to keep you all informed that we have arranged to discuss the issues regarding development of roads and drain, Garbage and other subjects with the department officers and HSR Layout Ward Committee members which will be held on Dt: 05.01.2019, on Saturday morning by 11.00 am at HSR layout ward office. And the meeting will be held in the presence of ward committee President Sri Gurumurthy Reddy So we kindly request you all to attend this meeting without fail.

Subject:

1. General Meeting.
2. Other Subjects with the permission of Committee President.

Lakshmi

ಅಧ್ಯಕ್ಷರು/ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ-174
ಬಿ.ಬಿ.ಎಂ.ಪಿ. ಬೆಂಗಳೂರು

ಗೆ/To
ಕಂದಾಯ ಇಲಾಖೆ
ಹೆಚ್.ಎಸ್.ಆರ್ ಬಡಾವಣೆ
ಬೆಂಗಳೂರು-೬೮

**ದಿನಾಂಕ 05-01-2019 ರಂದು ಬೆಳಿಗ್ಗೆ 11.00ಕ್ಕೆ ವಾರ್ಡ್ 174 ಸಮಿತಿಯ ಅಧ್ಯಕ್ಷರಾದ ಶ್ರೀ ಗುರುಮೂರ್ತಿ ರೆಡ್ಡಿರವರು ಪಾಲಿಕೆ ಸದಸ್ಯರ ಘನ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು**

ವಾರ್ಡ್ ಸಮಿತಿಯ ಅಧ್ಯಕ್ಷರು, ಸದ್ಯಸರು, ಕಾರ್ಯದರ್ಶಿ ಮತ್ತು ಅಧಿಕಾರಿ/ ನೌಕರರ ವರ್ಗದವರಿಗೆ ಸ್ವಾಗತ ಕೋರಲಾಗಿ, ಕಳೆದ ತಿಂಗಳ ದೂರುಗಳ ಬಗ್ಗೆ ವಿಚಾರ ಮಾಡಿ, ಅದರ ಆಗುಹೋಗುಗಳ ಬಗ್ಗೆ ತಿಳಿಸಲಾಯಿತು.

| ಹಾಜರಿ | ಗೈರು ಹಾಜರಿ |
|---|---|
| ಶ್ರೀ. ಗುರುಮೂರ್ತಿ ರೆಡ್ಡಿ (ಅಧ್ಯಕ್ಷರು) | ಶ್ರೀಮತಿ. ಪಿಳ್ಳಮ್ಮ (ಸದಸ್ಯರು) |
| ಶ್ರೀಮತಿ. ಪದ್ಮಶ್ರೀ (ಸದಸ್ಯರು) | ಶ್ರೀ. ನಾಗರಾಜು (ಸದಸ್ಯರು) |
| ಶ್ರೀ. ವೇಣುಗೋಪಾಲ್ ರೆಡ್ಡಿ (ಸದಸ್ಯರು) | ಶ್ರೀ. ಮುರಳಿ (ಸದಸ್ಯರು) |
| ಶ್ರೀ. ಗೋವಿಂದ ಸ್ವಾಮಿ (ಸದಸ್ಯರು) | ಶ್ರೀಮತಿ. ತ್ರಿವೇಣಿ (ಸದಸ್ಯರು) |
| ಶ್ರೀ. ಎಂ.ಶ್ರೀನಿವಾಸ ರೆಡ್ಡಿ (ಸದಸ್ಯರು) | ಶ್ರೀಮತಿ. ಡಾ॥ ಶಾಂತಿ (ಸದಸ್ಯರು) |
| ಶ್ರೀಮತಿ. ಲಕ್ಷ್ಮಿ (ಸ.ಕಂ.ಅ) | ಶ್ರೀಮತಿ. ಚಿತ್ರ (ಸದಸ್ಯರು) |

- ಶ್ರೀಮತಿ ವಿನುತಾರವರು ಮಾತಾನಾಡಿ ಇಬ್ಬಲೂರು, ಸನ್‌ಸಿಟಿ ಹಾಗೂ ಹೆಚ್.ಎಸ್.ಆರ್ ಬಡಾವಣೆಯಲ್ಲಿ ಸುಮಾರು 70% ರಷ್ಟು ಬೀದಿ ದೀಪ ದುರಸ್ತಿಯಲ್ಲಿರುವ ಬಗ್ಗೆ ತಿಳಿಸುತ್ತಾ ಸೂಕ್ತ ಕ್ರಮಕ್ಕಾಗಿ ಸೂಚಿಸಿದರು
- ಶ್ರೀಮತಿ ಪದ್ಮಶ್ರೀರವರು ಅಡ್ಡರಸ್ತೆಯ Culvertsಗಳ ದುರಸ್ತಿ ಬಗ್ಗೆ, 7ನೇ ಮೈನ್ 7ನೇ ಸೆಕ್ಟರ್, 21ನೇ ಮೈನ್, 10ನೇ ಅಡ್ಡರಸ್ತೆಯಲ್ಲಿ, 1ನೇ ಸೆಕ್ಟರ್ 31ನೇ ಮೈನ್, 21ನೇ ಮೈನ್‌ಗಳಲ್ಲಿ ಕೇಬಲ್‌ನವರು ರಸ್ತೆಯನ್ನು ಅಗೆದು Pothole ಮುಚ್ಚದೆ ಇರುವ ಬಗ್ಗೆ ಪ್ರಸ್ತಾಪಿಸಿದರು.
- ಶ್ರೀ. ಶ್ರೀನಿವಾಸ ರೆಡ್ಡಿರವರು ಅಗರ ಪ್ರಾಥಮಿಕ ಶಾಲೆಯ ಕಾಂಪೌಂಡ್‌ನ್ನು ಎತ್ತರಗೊಳಿಸುದು ಮತ್ತು ಶಾಲೆಯ ಮುಂಬದಿಯ ಪುಟ್‌ಪಾತ್‌ನ್ನು ತೆರವುಗೊಳಿಸುವ, ಶಾಲೆಯ ಶೌಚಾಲಯದ ಸ್ವಚತ್ತೆಯನ್ನು ಕಾಪಾಡುವುದು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಪ್ರಸ್ತಾಪಿಸಿ, 21ನೇ ಮೈನ್, 5ನೇ ಕ್ರಾಸ್‌ನಲ್ಲಿ ಚರಂಡಿಯ ಮುಚ್ಚುವ ಬಗ್ಗೆ, 24ನೇ ಮೈನ್, 4 ಮತ್ತು 5ನೇ ಕ್ರಾಸ್‌ನಲ್ಲಿ ಚರಂಡಿ ಮಾಡುವ ಬಗ್ಗೆ ತಿಳಿಸಿದರು.
- ಶ್ರೀ. ಗೋವಿಂದ ಸ್ವಾಮಿರವರು 24ನೇ ಮತ್ತು 27ನೇ ಮೈನ್ 11ನೇ ಕ್ರಾಸ್‌ನಲ್ಲಿ, ಬೆಸ್ಕಾಂರವರು ಯು.ಡಿ ಕೇಬಲ್‌ಗಳನ್ನು ಫುಟ್‌ಫಾತ್‌ನಲ್ಲಿಯೇ ಬಿಟ್ಟಿರುವ ಬಗ್ಗೆ ತಿಳಿಸುವ ಸಮಯದಲ್ಲಿ ಶ್ರೀಮತಿ ಲಲಿತಾಂಬ ಎಂಬುವರು ಧ್ವನಿಗೂಡಿಸಿ ಅಕೃತಿ ರಸ್ತೆಯಲ್ಲಿ ಬೆಸ್ಕಾಂ ರಸ್ತೆ ಅಗೆದು ಹಾಗೆಯೇ ಬಿಟ್ಟಿದ್ದು ಇದರಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಶ್ರೀ. ಗೋವಿಂದ ಸ್ವಾಮಿರವರು 27ನೇ ಮೈನ್‌ನಲ್ಲಿರುವ ಫುಟ್‌ಫಾತ್ ದುರಸ್ತಿಯ ಬಗ್ಗೆ, ಗುತ್ತಿಗೆದಾರರು ಟೆಂಡರ್ ಪಡೆದು, ಕಾರ್ಯ ಪೂರ್ಣಗೊಳಿಸದೆ 15ಕೋಟಿ, 8ಕೋಟಿ ಮತ್ತು 5ಕೋಟಿ ಬಿಲ್ಲು ಮಾಡಿರುವ ಮಾಡಿರುವ ಬಗ್ಗೆ, ಸೈಕಲ್ ಟ್ರಕ್ ಮತ್ತು ಪುಟ್‌ಫಾತ್‌ಗಳ ಕಾಮಗಾರಿಗಳನ್ನು ಪೂರ್ಣಗೊಳಿಸದೆ 19ಕೋಟಿಗಳನ್ನು ಬಿಲ್ಲು ಮಾಡಿರುವ ಬಗ್ಗೆ, ಔಟರ್ ರಿಂಗ್ ರೋಡ್‌ನ ಕಾಮಗಾರಿಯನ್ನು ಪೂರ್ಣಗೊಳಿಸದೆ 31ಕೋಟಿಗಳನ್ನು ಬಿಲ್ಲು ಮಾಡಿರುವ ಬಗ್ಗೆ, ಬೀದಿ ದೀಪಗಳು ಮತ್ತು ಕಂಬಗಳ ಟೈಮಾರ್ ದುರಸ್ತಿರುವ ಬಗ್ಗೆ ಪ್ರಸ್ತಾಪಿಸಿದರು.
- ಶ್ರೀ. ಗುರುಮೂರ್ತಿ ರೆಡ್ಡಿ, ಅಧ್ಯಕ್ಷರುಗಳು ಅಗರ, ಇಬ್ಬಲೂರು ಮತ್ತು ಸೋಮಸುಂದರ ಕೆರೆಯ ಕಾಮಗಾರಿಯನ್ನು ಪೂರ್ಣಗೊಳಿಸದೆ ಬಿಲ್ಲು ಪಡೆದಿರುವ ಬಗ್ಗೆ, ಬೀದಿ ನಾಯಿಗಳು ಮತ್ತು

ಹಂದಿ ಹವಳಿಯನ್ನು ತಡೆಗಟ್ಟುವ ಕುರಿತು. ವಾರ್ಡ್-174 ಹೆಚ್.ಎಸ್.ಆರ್ ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವಂತೆ ಸೂಚಿಸುತ್ತಾ. ಕೆ.ಈ.ಬಿ ಜಂಕ್ಷನ್‌ನಲ್ಲಿ ಚರಂಡಿಯ ಮೇಲ್ಭಾಗವನ್ನು ಮುಚ್ಚುಲು ತಿಳಿಸಲಾಯಿತು

- ಮೇಲ್ಕಂಡ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ. ಗುರುಮೂರ್ತಿ ರೆಡ್ಡಿ. ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Lakshmi

ಕಾರ್ಯದರ್ಶಿಗಳು
ಸಂಚಾಲಕರು

ಅಧ್ಯಕ್ಷರು
ಹಾಲಿ ಪಾಲಿಕೆ ಸದಸ್ಯರು
ವಾರ್ಡ್ 174-ಹೆಚ್.ಎಸ್.ಆರ್ ಬಡಾವಣೆ